No. DULT/81/PBS BENGALURU-GEN/2017-18 Date : 12.01.2018

**ನಗರ ಭೂ ಸಾರಿಗೆ ನಿರ್ದೇಶನಾಲಯ**

**ಸಾರ್ವಜನಿಕ ಬೈಸಿಕಲ್ ವ್ಯವಸ್ಥೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಯ್ದ ಸಮೂಹಗಳಲ್ಲಿ ಕಾರ್ಯಾಚರಣೆಗೊಳಿಸಲು "ಆಸಕ್ತಿ ವ್ಯಕ್ತಪಡಿಸಲು" ಆಹ್ವಾನ.**

ಸಾರ್ವಜನಿಕ ಬೈಸಿಕಲ್ ಹಂಚಿಕೆ ವ್ಯವಸ್ಥೆಯನ್ನು (PBS) ಆಯ್ದ ಸಮೂಹಗಳಲ್ಲಿ ಸ್ವಂತ ನಿಧಿ/ಹಣಕಾಸು ಸಂಪನ್ಮೂಲ ಉಪಯೋಗಿಸಿಕೊಂಡು ಒದಗಿಸುವ ಮತ್ತು ನಿರ್ವಹಿಸಲು ಆಸಕ್ತಿಯುಳ್ಳ ಕಂಪನಿಗಳು/ಸಂಸ್ಥೆಗಳಿಂದ "ಆಸಕ್ತಿ ವ್ಯಕ್ತಪಡಿಸುವ EOI" ನ್ನು ನಗರ ಭೂ ಸಾರಿಗೆ ನಿರ್ದೇಶನಾಲಯವು ಆಹ್ವಾನಿಸಿದೆ.

ಲಭ್ಯವಿರುವ ಮಾರ್ಗಸೂಚಿ ಅನುಸಾರದಂತೆ ನಗರ ಭೂ ಸಾರಿಗೆ ನಿರ್ದೇಶನಾಲಯವು ಸಾರ್ವಜನಿಕ ಬೈಸಿಕಲ್ ಹಂಚಿಕೆ ವ್ಯವಸ್ಥೆಗೆ (PBS) ಬೆಂಗಳೂರು (BBMP ವ್ಯಾಪ್ತಿಯಲ್ಲಿ) ಇರುವ ಬೇಡಿಕೆ ಮೌಲ್ಯಮಾಪನ ಮಾಡಿರುತ್ತದೆ. ನಗರ ಭೂ ಸಾರಿಗೆ ನಿರ್ದೇಶನಾಲಯದ ಮೌಲ್ಯಮಾಪನದ ವರದಿಯು DULT ವೆಬ್‌ಸೈಟ್ (www.urbantransport.kar.gov.in) ನಲ್ಲಿ ಲಭ್ಯವಿದೆ. ಆದಾಗ್ಯೂ ಸಹ ಪರ್ಮಿಟ್‌ಗಾಗಿ ಅರ್ಜಿ ಸಲ್ಲಿಸುವ ಮುನ್ನ ಎಲ್ಲಾ ಅರ್ಜಿದಾರರು ಸ್ವತಃ ಕಾರ್ಯಸಾಧ್ಯತಾ ಅಧ್ಯಯನ ನಡೆಸಿಕೊಳ್ಳಲು ಪ್ರೋತ್ಸಾಹ ನೀಡುತ್ತೇವೆ. ಆಸಕ್ತಿಯುಳ್ಳ ಅರ್ಜಿದಾರರು, ನಗರ ಭೂ ಸಾರಿಗೆ ನಿರ್ದೇಶನಾಲಯದಿಂದ ಯೋಜಿಸಿರುವ PBS ವ್ಯವಸ್ಥೆ ಮತ್ತು ಸಂಬಂಧಿಸಿದ ಸೈಕಲ್ ಮೂಲಸೌಕರ್ಯ ಕುರಿತ ಮಾಹಿತಿಯನ್ನು ಅಧ್ಯಯನ ಮಾಡಲು ಸಹ ಪ್ರೋತ್ಸಾಹಿಸಿದೆ. ಆಸಕ್ತಿಯುಳ್ಳ ಅರ್ಜಿದಾರರು **ಪರ್ಮಿಟ್ ಅರ್ಜಿಯನ್ನು** ವೆಬ್‌ಸೈಟ್ (www.urbantransport.kar.gov.in) ಯಿಂದ ಡೌನ್‌ಲೋಡ್ ಮಾಡಿಕೊಳ್ಳಲು ಕೋರಲಾಗಿದೆ. ಪೂರ್ಣಗೊಳಿಸಲಾದ ಪರ್ಮಿಟ್ ಅರ್ಜಿಯ ಎಲ್ಲಾ ಪುಟಗಳಿಗೂ ಅಧಿಕೃತ ಸಹಿಯೊಂದಿಗೆ ಹಾರ್ಡ್ ಕಾಪಿಯನ್ನು ಮತ್ತು ಇದರೊಂದಿಗೆ ಸಾಫ್ಟ್ ಕಾಪಿ ಹೊಂದಿರುವ ಸಿ.ಡಿ ಯೊಂದನ್ನು ಲಕೋಟೆಯಲ್ಲಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸತಕ್ಕದ್ದು.

**ಆಯುಕ್ತರ ಕಛೇರಿ**
ನಗರ ಭೂ ಸಾರಿಗೆ ನಿರ್ದೇಶನಾಲಯ
ಬಿಎಂಟಿಸಿ ಟಿಟಿಎಂಸಿ 'ಬಿ' ಬ್ಲಾಕ್ (ಬಸ್ ನಿಲ್ದಾಣದ ಮೇಲೆ)
4ನೇ ಮಹಡಿ, ಶಾಂತಿನಗರ, ಕೆ.ಹೆಚ್.ರಸ್ತೆ
ಬೆಂಗಳೂರು, ಕರ್ನಾಟಕ 560027.

ಈ ಲಕೋಟೆ (envelope) ಮೇಲೆ **"ಬೆಂಗಳೂರು ಸಾರ್ವಜನಿಕ ಬೈಸಿಕಲ್ ಹಂಚಿಕೆ ವ್ಯವಸ್ಥೆಗಾಗಿ ಪರ್ಮಿಟ್ ಅರ್ಜಿ"** ಎಂಬುದಾಗಿ ನಮೂದಿಸತಕ್ಕದ್ದು. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07, ಫೆಬ್ರವರಿ 2018. ಹೆಚ್ಚಿನ ಮಾಹಿತಿಯನ್ನು ಒದಗಿಸಲು ಮತ್ತು ಅನುಮಾನಗಳನ್ನು ಸ್ಪಷ್ಟಪಡಿಸುವ ಸಲುವಾಗಿ **ನಗರ ಭೂ ಸಾರಿಗೆ ನಿರ್ದೇಶನಾಲಯದ ಆಯುಕ್ತರವರ ಕಛೇರಿಯಲ್ಲಿ ದಿನಾಂಕ: 19, ಜನವರಿ 2018ರಂದು 11-00 ಗಂಟೆಗೆ** ಸಭೆಯೊಂದನ್ನು ಆಯೋಜಿಸಲಾಗಿದೆ. ದಯವಿಟ್ಟು ತಮ್ಮ ಬರುವಿಕೆಯನ್ನು 17, **ಜನವರಿ** 2018 ರೊಳಗೆ dultbangalore@gmail.com ಗೆ RSVP ಯನ್ನು ಕಳಿಸುವ ಮೂಲಕ ದೃಢೀಕರಿಸಬೇಕಾಗಿ ವಿನಂತಿಸಲಾಗಿದೆ.

ಯಾವುದೇ ಸ್ಪಷ್ಟನೆಗಾಗಿ ಅರ್ಜಿದಾರರು ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ ಇವರನ್ನು ಈಮೇಲ್ (dultbangalore@gmail.com) ಅಥವಾ ದೂರವಾಣಿ ಸಂಖ್ಯೆ. 080-22226627 ಇಲ್ಲಿಗೆ ಸಂಪರ್ಕಿಸಬಹುದಾಗಿದೆ.

**ಸಹಿ/-**
**ಆಯುಕ್ತರು**
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ